REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 31 । ಸಂಚಿಕೆ : 52 । 2 ಏಪ್ರಿಲ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್






**ಬೆಂಗಳೂರು** : ಮಹಾಮಂಡಳವು ದಿನಾಂಕ : 28.03.2025 ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ವಿಡಿಯೋಕಾನ್ಫರೆನ್ಸ್ ಮೂಲಕ The Annual Closing of Accounting Procedures (BDDR) as per R.B.I and Accounting System ವಿಷಯದ ಕುರಿತು ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಭಾಗವಹಿಸಿದ್ದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳಿಗೆ ಸ್ವಾಗತವನ್ನು ಕೋರಿ ಮಾತನಾಡಿ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಈಗಾಗಲೇ ತಮಗೆಲ್ಲ ತಿಳಿದಿರುವಂತೆ ಹಲವಾರು ವಿಷಯಗಳ ಬಗ್ಗೆ ಭೌತಿಕವಾಗಿ ಮತ್ತು ವೆಬಿನಾರ್ ಮೂಲಕ ಅನೇಕ ಮಾಹಿತಿಗಳನ್ನು ಒದಗಿಸುತ್ತಿರುವುದಲ್ಲದೆ ಪತ್ರಿಕೆಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ.

ಈ ದಿನ ಏರ್ಪಡಿಸಿರುವ ವೆಬಿನಾರ್‌ನಲ್ಲಿ ತಾವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗಪಡಿಸಿಕೊಳ್ಳಬೇಕೆಂದರು. ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್‌ರವರು The Annual Closing of Accounting Procedures (BDDR) As per R.B.I ವಿಷಯದ ಕುರಿತು ಮತ್ತು ಶ್ರೀ ಮಧುಕರ ಜಿ. ಹೆಗಡೆ ಚಾರ್ಟರ್ಡ್ ಅಕೌಂಟಂಟ್‌ರವರು Accounting System ವಿಷಯದ ಕುರಿತು ಉಪನ್ಯಾಸ ನೀಡಿದರು. ಈ ವೆಬಿನಾರ್‌ನಲ್ಲಿ 225ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

## ದುಬಾರಿಯಾಗಲಿದೆ ಎಟಿಎಂ ಬಳಕೆ, ವಿತ್‌ಡ್ರಾ ಶುಲ್ಕ ಹೆಚ್ಚಳಕ್ಕೆ ಆರ್‌ಬಿಐ ಒಪ್ಪಿಗೆ

**ಮುಂಬಯಿ** : ಮೇ 1 ರಿಂದ ಅನ್ವಯವಾಗುವಂತೆ 'ಎಟಿಎಂ' ಗಳಿಂದ ಹಣ ವಿತ್‌ಡ್ರಾ ಮಾಡುವುದರ ಮೇಲೆ ವಿಧಿಸಲಾಗುವ ಶುಲ್ಕವನ್ನು ರೂ.21 ಗಳಿಂದ ರೂ.23ಗೆ ಹೆಚ್ಚಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕ್‌ಗಳಿಗೆ ಅನುಮತಿ ನೀಡಿದೆ. ಮಾಸಿಕವಾಗಿ ಗರಿಷ್ಠ ಮಿತಿಗಿಂತಲೂ ಹೆಚ್ಚು ಬಾರಿ ಹಣವನ್ನು ಹಿಂಪಡೆದರೆ ಈ ಶುಲ್ಕ ಅನ್ವಯವಾಗಲಿದೆ. ಪ್ರಸ್ತುತ ಹೋಂ ಬ್ಯಾಂಕಿನ ಎಟಿಎಂಗಳಲ್ಲಿ ಮಾಸಿಕ 5 ವಿತ್‌ಡ್ರಾ ಶುಲ್ಕ ರಹಿತವಾಗಿದ್ದು, ಅದಕ್ಕಿಂತ ಹೆಚ್ಚು ಬಾರಿ ಹಣ ಹಿಂಪಡೆದರೆ ರೂ.21 ಶುಲ್ಕ ವಿಧಿಸಲಾಗುತ್ತಿದೆ. ಇದನ್ನು ರೂ.2ಕ್ಕೆ ಹೆಚ್ಚಿಸಲು ಅನುಮತಿ




2ನೇ ಪುಟಕ್ಕೆ...

ಮೈಸೂರಿನ ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕಿನ ನಾಲ್ಕನೇ ಶಾಖೆಯ ಉದ್ಘಾಟನೆ 4

ತೆರಿಗೆ ವಂಚನೆ ಮೇಲೆ ಡಿಜಿಟಲ್‌ಟೂಲ್‌ಗಳ ಮೂಲಕವೂ ಕಣ್ಣಿಡಲಿದೆ ಆದಾಯ ತೆರಿಗೆ ಇಲಾಖೆ 6

ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ಜೀವನದಲ್ಲಿ ಸಂಗ್ರಹ ಮುಖ್ಯವಲ್ಲ, ಬದುಕು ಮುಖ್ಯ

"ಜೀವನದಲ್ಲಿ ಎರಡು ಮುಖ್ಯವಾದ ವಿಚಾರಗಳಿವೆ. ಒಂದು ಯಶಸ್ಸು, ಇನ್ನೊಂದು ಸಂತೃಪ್ತಿ. ಯಶಸ್ಸನ್ನು ಇತರರು ಅಳೆಯುತ್ತಾರೆ. ಆದರೆ ಸಂತೃಪ್ತಿಯನ್ನು ನಮ್ಮ ಹೃದಯವೇ ಅಳೆಯುತ್ತದೆ. ನಾವು ಯಶಸ್ಸಿನ ಹಿಂದೆ ಬಿದ್ದು ಸಂಗ್ರಹ ಮಾಡಲು ತೊಡಗಿದ್ದೇವೆ. ಬರೀ ದುಡ್ಡು ಸಂಪಾದನೆ ಮಾಡಿದರೆ ಯಶಸ್ಸು ಅಲ್ಲ. ಯಶಸ್ಸು ಜನರಿಗೆ ಗೊತ್ತಾಗಬಹುದು. ಆದರೆ ಸಂತೃಪ್ತಿ ನಮ್ಮ ಹೃದಯಕ್ಕೆ ಗೊತ್ತಾಗುತ್ತದೆ. ಅದಕ್ಕೆ ಜೀವನದಲ್ಲಿ ಸಂತೃಪ್ತಿ ಬಹಳ ಮುಖ್ಯ. ಸಂತೃಪ್ತಿ ಕಳೆದುಕೊಂಡು ಸಂಗ್ರಹ ಮಾಡಿದರೆ ಅದು ದುಃಖಕ್ಕೆ ಕಾರಣವಾಗುತ್ತದೆ. ಒಂದು ಪಕ್ಷಿ ಗೂಡು ಕಟ್ಟುತ್ತದೆ. ಎಲ್ಲೆಲ್ಲಿಂದಲೋ ಕಾಳುಗಳನ್ನು ಹೆಕ್ಕಿ ತರುತ್ತದೆ. ಮರಿಗಳಿಗೆ ತಿನ್ನಿಸುತ್ತದೆ. ಪಕ್ಷಿಗೆ ಗೂಡು ಮುಖ್ಯವಲ್ಲ. ಒಂದು ದಿನ ಹಾರಿ ಹೋಗುತ್ತದೆ. ಪಕ್ಷಿಗೆ ಮಕ್ಕಳು ಮುಖ್ಯ, ಬದುಕು ಮುಖ್ಯ. ಸಂಗ್ರಹ ಮುಖ್ಯವಲ್ಲ, ಬದುಕು ಮುಖ್ಯ ಎನ್ನುವುದನ್ನು ಮನುಷ್ಯ ತಿಳಿದುಕೊಳ್ಳಬೇಕು. ಸಂಗ್ರಹ ಹೆಚ್ಚಾಗಿರುವುದರಿಂದ ಬದುಕಿನ ಸಂತೃಪ್ತಿ ಕಳೆದುಹೋಗಿದೆ. ಸಂಗ್ರಹ ಎಷ್ಟು ಬೇಕೋ ಅಷ್ಟು ಇರಬೇಕು."

ನಾನು ಅಪಾರವಾಗಿ ಗೌರವಿಸುವ ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಸ್ವಾಮಿಜಿಗಳು ತಮ್ಮ ಅಂಕಣದಲ್ಲಿ ಮೇಲಿನಂತೆ ಹೇಳಿದ್ದಾರೆ. ಆದರೆ ಇಂದೇನಾಗಿದೆ ನೋಡಿ; ಆಧುನಿಕ ಜೀವನದಲ್ಲಿ ಪ್ರತಿಯೊಬ್ಬರೂ, ಅದರಲ್ಲೂ ಯುವ ಜನತೆ ಸಂಪತ್ತಿನ ಸಂಗ್ರಹದಲ್ಲಿ ಬಿಡುವಿಲ್ಲದೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇದರಿಂದಾಗಿ ಅವರುಗಳು ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಿದ್ದಾರೆ.

ಕಲಿಕೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸುವ, ಕೆಲಸದಲ್ಲಿ ಗುರಿ ಮುಟ್ಟುವ, ವೃತ್ತಿಯಲ್ಲಿ ಉನ್ನತ ಸ್ಥಾನ ಪಡೆಯುವ, ಅಪಾರ ಸಂಪತ್ತನ್ನು ಸಂಗ್ರಹಿಸಿ ತಾನು ಸಿರಿವಂತನಾಗಬೇಕೆನ್ನುವ ಹೀಗೆ ಹಲವು ಬಗೆಯ ಒತ್ತಡಗಳು ಜನರನ್ನು ಮಾನಸಿಕವಾಗಿ, ದೈಹಿಕವಾಗಿ ಬಳಲುವಂತೆ ಮಾಡುತ್ತಿದೆ. ಈ ರೀತಿಯಾಗಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಒತ್ತಡದಲ್ಲಿ ನರಳುತ್ತಿದ್ದಾರೆ.

ಹೀಗೆ ಸಂಪತ್ತಿನ ಸಂಗ್ರಹದಲ್ಲಿ ತೊಡಗಿದವರ ಬಳಿ ಎಲ್ಲಾ ಇದ್ದರೂ ನೆಮ್ಮದಿ ಇಲ್ಲವಾಗಿದೆ. ಖುಷಿ ಇಲ್ಲವಾಗಿದೆ. ಸದಾ ಅತೃಪ್ತ, ಅಸಮಾಧಾನದಿಂದ ಕೂಡಿದ ಜೀವನ ಇವರದಾಗಿದೆ. ಈ ಸಮಸ್ಯೆಯಿಂದ ಪಾರಾಗಲು ಏನು ಮಾಡಬೇಕು ಎಂಬುದನ್ನೂ ಅವಲೋಕಿಸುವುದು ಬಹಳ ಮುಖ್ಯವಾಗಿದೆ.

ಹೀಗೆ ಒತ್ತಡದಲ್ಲಿ ಮುಳಗಿ ಬದುಕನ್ನು ನಿರ್ವಹಣೆ ಮಾಡುವುದನ್ನು ಕಲಿಯದಿದ್ದರೆ ಮುಂದಿನ ದಿನಗಳಲ್ಲಿ ರಕ್ತದೊತ್ತಡ, ಸಕ್ಕರೆ ಕಾಯಿಲೆಗಳಿಗೆ ಶರೀರ ಸಿಲುಕುತ್ತದೆ. ಈ ರೀತಿಯಾದ ಒತ್ತಡಗಳಿಂದ ಹೊರ ಬರುವುದು ಕಷ್ಟವಲ್ಲ, ಅದಕ್ಕೆ ಮನಸ್ಸು ಮಾಡಬೇಕಿದೆ. ತನ್ನ ಮಿತಿಯಲ್ಲಾದಷ್ಟು ಗುರಿ ಸಾಧಿಸುವುದು, ತನಗೆ ಅಗತ್ಯವಿರುವಷ್ಟು ಸಂಪಾದಿಸುವುದು, ತನ್ನ ಸಾಧನೆ ದೊರೆತಷ್ಟರಲ್ಲೇ ತೃಪ್ತಿ ಪಡೆಯುವುದನ್ನು ಮೊದಲು ಕಲಿಯಬೇಕಿದೆ.

ಜೀವನವೆಂದರೆ ಬರಿ ಹಣ, ಅಂತಸ್ತು, ಸ್ಥಾನಮಾನಗಳಲ್ಲ. ಕುಟುಂಬದ ಎಲ್ಲರೊಂದಿಗೆ ಕುಳಿತು ಮಾತನಾಡುವುದು, ಸ್ನೇಹಿತರರೊಂದಿಗೆ ಕಾಲ ಕಳೆಯುವುದು ಮುಖ್ಯವಾಗುತ್ತದೆ. ಹಸುರು ಗಿಡ, ಹೂವಿನ ಕುಂಡಗಳನ್ನು ಬೆಳೆಸುವುದರಿಂದ ಮನಸ್ಸು ಉಲ್ಲಾಸಗೊಂಡು ಶಾಂತಿಯಿಂದ, ಪ್ರಫುಲ್ಲತೆಯಿಂದ ನೆಮ್ಮದಿ ದೊರೆಯುತ್ತದೆ. ಇದಕ್ಕಿಂತಲೂ ಜೀವನಕ್ಕೆ ಬೇರೇನುಬೇಕಿದೆ.

ಮತ್ತೊಮ್ಮೆ ಸ್ವಾಮೀಜಿಯವರು ಹೇಳಿರುವ ಮೇಲಿನ ಪ್ಯಾರ ಓದಿಕೊಳ್ಳಿ; ಸಂಗ್ರಹ ಮುಖ್ಯವಲ್ಲ, ಬದುಕು ಮುಖ್ಯ ಎನ್ನುವುದನ್ನು ತಿಳಿದುಕೊಳ್ಳಿ.

▸▸ ಎಚ್.ಕೆ. ಪಾಟೀಲ

...1ನೇ ಪುಟದಿಂದ

ನೀಡಲಾಗಿದೆ. ಇತರೆ ಬ್ಯಾಂಕುಗಳ ಎಟಿಎಂಗಳಿಂದ ಮೆಟ್ರೋ ನಗರಗಳಲ್ಲಿ 3 ಬಾರಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 5 ಬಾರಿ ಉಚಿತವಾಗಿ ಹಣ ಹಿಂಪಡೆಯಬಹುದು. ನಂತರದ ವಹಿವಾಟುಗಳಿಗೆ ಈ ಶುಲ್ಕವನ್ನು ವಿಧಿಸಲಾಗುತ್ತದೆ. "ಉಚಿತ ವಹಿವಾಟುಗಳ ನಂತರ, ಗ್ರಾಹಕರಿಗೆ ಪ್ರತಿ ವಹಿವಾಟಿಗೆ ಗರಿಷ್ಠ 23 ರೂಪಾಯಿ ಶುಲ್ಕವನ್ನು ವಿಧಿಸಬಹುದು. ಇದು ಮೇ 1, 2025 ರಿಂದ ಜಾರಿಗೆ ಬರುತ್ತದೆ, ಎಂದು ಆರ್‌ಬಿಐ ತನ್ನ ಸುತ್ತೋಲೆಯಲ್ಲಿ ತಿಳಿಸಿದೆ.

ನಗದು ಠೇವಣಿ ವಹಿವಾಟುಗಳನ್ನು ಹೊರತುಪಡಿಸಿ, ನಗದು ಮರುಬಳಕೆ ಯಂತ್ರಗಳಲ್ಲಿ ಮಾಡಿದ ವಹಿವಾಟುಗಳಿಗೂ ಈ ಶುಲ್ಕಗಳು ಅನ್ವಯವಾಗುತ್ತವೆ ಎಂದು ಆರ್‌ಬಿಐ ತಿಳಿಸಿದೆ. ಎಟಿಎಂ ಬಳಕೆ ಶುಲ್ಕ ಹೆಚ್ಚಿಸಲು ಸ್ಪಷ್ಟ ಕಾರಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೀಡಿಲ್ಲ. ಆದರೆ, ಎಟಿಎಂ ನಿರ್ವಹಣಾ ವೆಚ್ಚ ಹೆಚ್ಚಳ ಮತ್ತು ಬ್ಯಾಂಕುಗಳ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗಿದೆ.




**ಕ್ರೆಡಿಟ್ ಕಾರ್ಡ್ ರಿವಾರ್ಡ್ಸ್ ನಿಯಮದಲ್ಲಿ ಬದಲಾವಣೆ :** ಏಪ್ರಿಲ್ 1 ರಿಂದ ಕ್ರೆಡಿಟ್ ಕಾರ್ಡ್ ನಿಯಮಗಳಲ್ಲಿಯೂ ಮಹತ್ವದ ಬದಲಾವಣೆ ಆಗಲಿದೆ. ಬಹುತೇಕ ಬ್ಯಾಂಕ್‌ಗಳು ರಿವಾರ್ಡ್ಸ್ ಪಾಯಿಂಟ್‌ಗಳನ್ನು ಕಡಿತ ಮಾಡಲಿದ್ದು, ವಿಶೇಷ ಎಂದರೆ ವಾರ್ಷಿಕ ಶುಲ್ಕ ವಿಧಿಸುತ್ತಿರುವ ಬ್ಯಾಂಕ್‌ಗಳು ಅದನ್ನು ತೆಗೆದು ಹಾಕಲಿವೆ. ಅಂದರೆ ಬಹಳಷ್ಟು ಬ್ಯಾಂಕುಗಳ ಕ್ರೆಡಿಟ್ ಕಾರ್ಡ್‌ಗಳಿಗೆ ವಾರ್ಷಿಕ ಶುಲ್ಕವು ಇರುವುದಿಲ್ಲ.

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಪಟ್ಟಣ ಸಹಕಾರ ಬ್ಯಾಂಕುಗಳು ತಾವು ಏರ್ಪಡಿಸುವ ಕಾರ್ಯಕ್ರಮಗಳ ಫೋಟೋ (ಛಾಯಾಚಿತ್ರಗಳು) ಮತ್ತು ವರದಿಗಳು ಹಾಗೂ ಬ್ಯಾಂಕಿನ ಪ್ರಗತಿ ಚಿತ್ರದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸಕ್ಕೆ (email: editorkubf1@gmail.com, kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

# ಸಕಾಲದಲ್ಲಿ ಕಂತು ಪಾವತಿಸಲು ವಿಫಲವಾದ ಗ್ರಾಹಕರ ಮೇಲೆ ಹೆಚ್ಚುವರಿ ಶುಲ್ಕ ವಿಧಿಸದಂತೆ ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕಿನಿಂದ ಸೂಚನೆ



**ನವದೆಹಲಿ :** ಜನರು ತಮಗೆ ಅಗತ್ಯವಿದ್ದ ವಸ್ತುಗಳನ್ನು ಕಂತಿನ ರೂಪದಲ್ಲಿ ಖರೀದಿಸುತ್ತಾರೆ. ಆದರೆ ಕೆಲವೊಮ್ಮೆ ತಿಂಗಳ ಸಾಲದ ಕಂತು ಪಾವತಿಸಲು ಸಾಧ್ಯವಾಗದ ಸಂದರ್ಭಗಳು ಎದುರಾಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ, ತೊಂದರೆಗೊಳಗಾದ ಗ್ರಾಹಕರಿಗೆ ಪರಿಹಾರ ನೀಡಲು ಆರ್‌ಬಿಐ ನಿರ್ಧರಿಸಿದೆ.

ಒಬ್ಬ ವ್ಯಕ್ತಿಯು ಸಾಲ ಅಥವಾ ಕಂತಿನ ಮೇಲೆ ಸರಕುಗಳನ್ನು ಖರೀದಿಸಿದಾಗಲೆಲ್ಲಾ, ಅವನು ತನ್ನ ಆದಾಯದ ಪ್ರಕಾರ ಕಂತು ಕಟ್ಟುವುದನ್ನು ನಿರ್ಧರಿಸುತ್ತಾನೆ. ಆದರೆ ಕೆಲವೊಮ್ಮೆ, ಆರ್ಥಿಕ ತೊಂದರೆಗೆ ಒಳಗಾದಾಗ ಸಕಾಲದಲ್ಲಿ ಸಾಲದ ಕಂತು ಮರುಪಾವತಿಸುವುದು ಕಷ್ಟಕರವಾಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ಈ ಬಗೆಯ ಗ್ರಾಹಕರಿಗಾಗಿ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದ್ದು, ಇದರ ಅಡಿಯಲ್ಲಿ ಬ್ಯಾಂಕುಗಳು ಇನ್ನು ಮುಂದೆ ನಿರಂಕುಶವಾಗಿ ವರ್ತಿಸಲು ಅವಕಾಶವಿರುವುದಿಲ್ಲ. ಹೊಸ ನಿಯಮಗಳ ಅಡಿಯಲ್ಲಿ, ಎಲ್ಲಾ ಬ್ಯಾಂಕುಗಳು ಹೆಚ್ಚುವರಿ ಶುಲ್ಕವನ್ನು ವಿಧಿಸವಂತಿಲ್ಲವೆಂದು ಆರ್‌ಬಿಐ ನಿರ್ದೇಶಿಸಿದೆ. ಗ್ರಾಹಕರು ಸಾಲವನ್ನು ಮರು ಪಾವತಿಸದಿದ್ದರೆ, ಬ್ಯಾಂಕ್ ವಿವಿಧ ರೀತಿಯ ಶುಲ್ಕಗಳನ್ನು ವಿಧಿಸುತ್ತದೆ. ಈ ಶುಲ್ಕಗಳು ಗ್ರಾಹಕರ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ ಮತ್ತು ಸಾಲದ ಮೊತ್ತವನ್ನು ಹೆಚ್ಚಿಸುತ್ತವೆ. ಈ ಹಿನ್ನೆಲೆಯಲ್ಲಿ ಆರ್‌ಬಿಐ ಹೊಸ ನಿಯಮಗಳನ್ನು ಪ್ರಕಟಿಸಿದೆ. ಹೊಸ ನಿಯಮಗಳ ಅಡಿಯಲ್ಲಿ, ಸಾಲ ಮರುಪಾವತಿ ಮಾಡದಿದ್ದಕ್ಕಾಗಿ ವಿಧಿಸಲಾಗುವ ದಂಡ ಮತ್ತು ಬಡ್ಡಿದರಗಳಲ್ಲಿ ಬ್ಯಾಂಕುಗಳು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ಬ್ಯಾಂಕ್ ಹೀಗೆ ಮಾಡದಿದ್ದರೆ, ಆರ್‌ಬಿಐ ಅದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತದೆ.

**ದಂಡದ ನಿಯಮಗಳಲ್ಲಿ ಬದಲಾವಣೆಗಳು :** ಆರ್‌ಬಿಐ ಸಾಲ ಖಾತೆಗಳಿಗೆ ದಂಡದ ನಿಯಮಗಳನ್ನು ಬದಲಾಯಿಸಿದೆ. ಈಗ ಬ್ಯಾಂಕುಗಳು ತಮ್ಮ ಆದಾಯವನ್ನು ಹೆಚ್ಚಿಸುವ ಸಾಧನವಾಗಿ ದಂಡವನ್ನು ಬಳಸುವಂತಿಲ್ಲ, ಇದರಲ್ಲಿ ಬ್ಯಾಂಕೇತರ ಹಣಕಾಸು ಸಂಸ್ಥೆಗಳೂ ಸೇರಿವೆ.

**ಹೊಸ ನಿಯಮಗಳ ಪ್ರಯೋಜನಗಳು :** ಗ್ರಾಹಕರು ಸಕಾಲದಲ್ಲಿ ಕಂತು ಪಾವತಿಸಲು ಅಸಾಧ್ಯವಾದಾಗ, ಅಂತಹ ಗ್ರಾಹಕರು ಹೊಸ ನಿಯಮಗಳ ನೇರ ಪ್ರಯೋಜನವನ್ನು ಪಡೆಯುತ್ತಾರೆ. ಅವರ ಮೇಲೆ ಬ್ಯಾಂಕುಗಳು ಯಾವುದೇ ಹೆಚ್ಚುವರಿ ದಂಡವನ್ನು ನಿರಂಕುಶವಾಗಿ ವಿಧಿಸದಂತೆ ಸೂಚಿಸಲಾಗಿದೆ. ದಂಡದ ಮಿತಿಯನ್ನು ಸಹ ನಿಗದಿಪಡಿಸಲಾಗಿದೆ. ಆದ್ದರಿಂದ ಗ್ರಾಹಕರು ಹೆಚ್ಚುವರಿ ಹಣವನ್ನು ಪಾವತಿಸಬೇಕಾಗುವುದಿಲ್ಲ. ಆರ್‌ಬಿಐನ ಹೊಸ ನಿಯಮಗಳು ವಾಣಿಜ್ಯ, ಗೃಹ ಸಾಲ ಕಂಪನಿಗಳು, ಎಕ್ಸಿಮ್ ಬ್ಯಾಂಕ್, ಬ್ಯಾಂಕೇತರ ಹಣಕಾಸು ಸಂಸ್ಥೆಗಳು, ಎನ್‌ಎಚ್‌ಬಿ, ಎನ್‌ಬಿಎಫ್‌ಐಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಗೆ ಅನ್ವಯಿಸುತ್ತವೆ.

# ಬ್ಯಾಂಕಿಂಗ್ ಮಸೂದೆಗೆ ಒಪ್ಪಿಗೆ ನಾಲ್ವರು ನಾಮಿನಿಗೆ ಅವಕಾಶ



**ನವದೆಹಲಿ :** ಬ್ಯಾಂಕ್‌ಗಳ ಆಡಳಿತ ಸುಧಾರಣೆ ಹಾಗೂ ಠೇವಣಿದಾರರ ಹಿತರಕ್ಷಣೆಗೆ ಸಂಬಂಧಿಸಿದಂತೆ ಮಂಡಿಸಿದ್ದ ಬ್ಯಾಂಕಿಂಗ್ ಕಾನೂನು ತಿದ್ದುಪಡಿ ಮಸೂದೆ 2024ಕ್ಕೆ ರಾಜ್ಯಸಭೆಯು, ಧ್ವನಿಮತದ ಮೂಲಕ ಒಪ್ಪಿಗೆ ನೀಡಿದೆ. ಹಳೆಯ ಕಾಯ್ದೆಯಡಿ ಬ್ಯಾಂಕ್ ಖಾತೆಗೆ ಒಬ್ಬರ ನಾಮಿನಿಗೆ ಅವಕಾಶವಿದೆ. ಇನ್ನು ಮುಂದೆ ಏಕಕಾಲದಲ್ಲಿ ಠೇವಣಿದಾರರು ನಾಲ್ವರನ್ನು ನಾಮಿನಿಯಾಗಿ ಸೇರ್ಪಡೆಗೊಳಿಸಲು ಈ ಮಸೂದೆಯು ಅವಕಾಶ ಕಲ್ಪಿಸಿದೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಲೋಕಸಭೆಯು ಈ ಮಸೂದೆಗೆ ಅನುಮೋದನೆ ನೀಡಿತ್ತು.

ಹಳೆಯ ಕಾಯ್ದೆಯಡಿ ಕಂಪನಿಗಳ ನಿರ್ದೇಶಕರ ಆಸ್ತಿ ಮೌಲ್ಯದ ಮಿತಿಯನ್ನು ನಿಗದಿಪಡಿಸಲಾಗಿದೆ. ಮಸೂದೆಯಲ್ಲಿ ಈ ಮಿತಿ ಹೆಚ್ಚಳದ ಜೊತೆಗೆ 'ಸಬ್‌ಸ್ಟಾನ್ಷಿಯಲ್ ಇಂಟರೆಸ್ಟ್' ಬಗ್ಗೆ ಮರು ವ್ಯಾಖ್ಯಾನ ಮಾಡಲಾಗಿದೆ. ಕಂಪನಿಯ ನಿರ್ದೇಶಕರು ರೂ.5ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಆಸ್ತಿ ಹೊಂದಿದ್ದರೆ ಅದನ್ನು 'ಸಬ್‌ಸ್ಟಾನ್ಷಿಯಲ್ ಇಂಟರೆಸ್ಟ್' ಎಂದು ನಿರ್ಧರಿಸಲಾಗುತ್ತದೆ. ಅಂತಹವರಿಗೆ ಸಾಲ ನೀಡಲು ಆಡಳಿತ ಮಂಡಳಿಯ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿತ್ತು. ಮಸೂದೆಯಲ್ಲಿ ನಿರ್ದೇಶಕರ ಆಸ್ತಿಯ ಮಿತಿಯನ್ನು ರೂ.2 ಕೋಟಿಗೆ ಹೆಚ್ಚಿಸಲಾಗಿದೆ. ಇಷ್ಟು ಮೊತ್ತದ ಷೇರುಗಳ ಒಡೆತನ ಅಥವಾ ಮಾಲೀಕತ್ವವನ್ನು ಹೊಂದಬಹುದಾಗಿದೆ.

## ಮೈಸೂರಿನ ಶ್ರೀ ಕನ್ಯಕಾಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕಿನ ನಾಲ್ಕನೇ ಶಾಖೆಯ ಉದ್ಘಾಟನೆ





**ಮೈಸೂರು** : ನಗರದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ಶ್ರೀ ಕನ್ಯಕಾಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕಿನ ನಾಲ್ಕನೇ ಶಾಖೆಯನ್ನು ಆರಂಭಿಸಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್.ವಿ. ರಾಜೀವ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ ಆರ್.ಪಿ. ರವಿಶಂಕರ್, ಸಹಕಾರ ಒಕ್ಕೂಟದ ಎಸ್. ಚಂದ್ರಶೇಖರ್ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು.

ಉದ್ಘಾಟನೆಯ ಜೊತೆಗೆ ಶಾಖೆಯ ಆವರಣದಲ್ಲಿ ಹೊಸ ಎಟಿಎಂ ಸೌಲಭ್ಯಕ್ಕೂ ಚಾಲನೆ ನೀಡಲಾಯಿತು. ಮೈಸೂರು ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕ ಬಿ.ಬೀರೇಂದ್ರ, ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಸ್.ಎಚ್.ಮನೋಜ್‌ಕುಮಾರ್, ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ದಿನೇಶ್, ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ಛೇರ್ಮನ್ ಈ. ದಿಲೀಪ್‌ಕುಮಾರ್, ಬ್ಯಾಂಕಿನ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.

ಬ್ಯಾಂಕಿನ ಅಧ್ಯಕ್ಷರಾದ ಎಚ್.ಎಂ. ಸಂದೀಪ್‌ರವರು ಮಾತನಾಡಿ ಪ್ರಸ್ತುತ ಎಸ್‌ಕೆಪಿಸಿ ಬ್ಯಾಂಕ್ ಮೈಸೂರಿನಲ್ಲಿ ಮೂರು ಶಾಖೆಗಳನ್ನು ನಿರ್ವಹಿಸುತ್ತಿದೆ. ಕೆ.ಆರ್. ವೃತ್ತದಲ್ಲಿ ಮುಖ್ಯ ಶಾಖೆ ಮತ್ತು ವಿದ್ಯಾರಣ್ಯಪುರಂ ಮತ್ತು ಕುವೆಂಪು ನಗರದಲ್ಲಿ ಉಪ ಶಾಖೆಗಳಿದ್ದು, ಈ ಶಾಖೆಗಳು ಒಟ್ಟಾಗಿ ನಗರದಾದ್ಯಂತ 30,000ಕ್ಕೂ ಹೆಚ್ಚು ಠೇವಣಿದಾರರು ಮತ್ತು ಖಾತೆದಾರರಿಗೆ ಸೇವೆ ಸಲ್ಲಿಸುತ್ತಿವೆ.

ಇತ್ತೀಚೆಗೆ ಮುಂಬೈನಲ್ಲಿ ನಡೆದ ಭಾರತ್ ಕೋ–ಆಪರೇಟಿವ್ ಬ್ಯಾಂಕಿಂಗ್ ಶೃಂಗಸಭೆ – 2024ರಲ್ಲಿ ಶ್ರೀ ಕನ್ಯಕಾಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕಿಗೆ ಅತ್ಯುತ್ತಮ ಡೇಟಾ ಸೆಂಟರ್ ಇಂಪ್ಲಿಮೆಂಟೇಷನ್ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸರ್ಕಾರವು ಎಸ್‌ಕೆಪಿಸಿ ಬ್ಯಾಂಕ್ ಅನ್ನು ಅತ್ಯುತ್ತಮ ನಗರ ಸಹಕಾರಿ ಬ್ಯಾಂಕ್ ಎಂದು ಗುರುತಿಸಿದೆ. ಗ್ರಾಹಕ ಕೇಂದ್ರಿತ ಉಪಕ್ರಮಗಳಿಗೆ ಬ್ಯಾಂಕಿನ ಬದ್ಧತೆಯನ್ನು ತಿಳಿಸಿದರಲ್ಲದೆ, ಹೊಸ ಶಾಖೆಯನ್ನು ಸಾಧ್ಯವಾಗಿಸುವಲ್ಲಿ ಬ್ಯಾಂಕಿನ ಗ್ರಾಹಕರು ಮತ್ತು ಸಿಬ್ಬಂದಿಯ ಸಾಮೂಹಿಕ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## 11ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಲಿಖಿತ ಪರೀಕ್ಷೆಗಳು ದಿನಾಂಕ : 12.04.2025, 13.04.2025 ಮತ್ತು 14.04.2025ರಂದು ಜರುಗಲಿವೆ

**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಆರ್‌ಐಸಿಎಂ ಬೆಂಗಳೂರು ಈ ಸಂಸ್ಥೆಯೊಂದಿಗೆ ಏರ್ಪಡಿಸಲಾಗಿದೆ.

11ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಲಿಖಿತ ಪರೀಕ್ಷೆಗಳು ದಿನಾಂಕ : 12.04.2025, 13.04.2025 ಮತ್ತು 14.04.2025ರಂದು ಬೆಂಗಳೂರು ಮತ್ತು ಬೆಳಗಾವಿ ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿವೆ. ಬೆಂಗಳೂರು ವಿಭಾಗಕ್ಕೆ ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳು ಆರ್.ಐ.ಸಿ.ಎಂ, ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560070 ಮತ್ತು ಬೆಳಗಾವಿ ವಿಭಾಗಕ್ಕೆ ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಪ್ರಾಂತೀಯಕಛೇರಿ, ನಂ.ಸಿಎ–3, ಅಟೋ ನಗರ, ಆರ್‌ಟಿಓ ಮೈದಾನದ ಹತ್ತಿರ, ಬೆಳಗಾವಿ–590015 ಈ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಲಿವೆ. ಹೆಚ್ಚಿನ ವಿವರಗಳಿಗಾಗಿ ಮಹಾಮಂಡಳದ ಸಂಪರ್ಕ ಅಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

# ಪಟ್ಟಣ ಸಹಕಾರ ಬ್ಯಾಂಕ್‌ನ ಸಿಸ್ಟಮ್ ಮತ್ತು ನೆಟ್‌ವರ್ಕ್ ನಿರ್ವಾಹಕರ ಪಾತ್ರಗಳು ಮತ್ತು ಜವಾಬ್ದಾರಿಗಳು

ಇಂದಿನ ಡಿಜಿಟಲ್ ಯುಗದಲ್ಲಿ ಸಹಕಾರಿ ಬ್ಯಾಂಕುಗಳು ತಮ್ಮ ಕಾರ್ಯಾಚರಣೆಗಳನ್ನು ಸಮರ್ಥವಾಗಿ ನಿರ್ವಹಿಸಲು ದೃಢವಾದ ವ್ಯವಸ್ಥೆಗಳು ಮತ್ತು ನೆಟ್‌ವರ್ಕ್‌ಗಳನ್ನು ಅವಲಂಬಿಸಿವೆ. ಈ ವ್ಯವಸ್ಥೆಗಳು ಸುಗಮವಾಗಿ ಕಾರ್ಯನಿರ್ವಹಣೆ ಮಾಡಲು ಸಿಸ್ಟಮ್ ಮತ್ತು ನೆಟ್‌ವರ್ಕ್ ನಿರ್ವಾಹಕರು ಪ್ರಮುಖ ಪಾತ್ರವಹಿಸುತ್ತಾರೆ.

### ಸಿಸ್ಟಮ್ ಅಡ್ಮಿನಿಸ್ಟ್ರೇಷನ್ :

- ಕಂಪ್ಯೂಟರ್ ಸಿಸ್ಟಮ್‌ಗಳು, ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರನ್ನು ಸ್ಥಾಪಿಸಿ, ಕಾನ್ಫಿಗರ್ ಮಾಡಿ ಮತ್ತು ನಿರ್ವಹಿಸುವುದು ಬಹುಮುಖ್ಯ.
- ಸಿಸ್ಟಮ್ ಅಪ್ಟೈಮ್ ಅನ್ನು ಖಚಿತ ಪಡಿಸಿಕೊಳ್ಳಿ ಮತ್ತು ಸಮಸ್ಯೆಗಳನ್ನು ತ್ವರಿತವಾಗಿ ನಿವಾರಿಸಿಕೊಳ್ಳಿ.
- ಬಳಕೆದಾರ ಖಾತೆಗಳು, ಅನುಮತಿಗಳು ಮತ್ತು ಪ್ರವೇಶ ನಿಯಂತ್ರಣಗಳನ್ನು ನಿರ್ವಹಿಸಿ.
- ಫೈರ್‌ವಾಲ್‌ಗಳು ಮತ್ತು ಆಂಟಿವೈರಸ್ ಸಾಫ್ಟ್‌ವೇರ್‌ನಂತಹ ಸಿಸ್ಟಮ್ ಭದ್ರತಾಕ್ರಮಗಳನ್ನು ಅಳವಡಿಸದಿದ್ದರೆ ಕಂಪ್ಯೂಟರ್ ಪದೇ ಪದೇ ರಿಪೇರಿಗೆ ಬರುವುದು ಖಚಿತ.

### ನೆಟ್‌ವರ್ಕ್ ನಿರ್ವಹಣೆ :

- LAN, WAN ಮತ್ತು Wi-Fi ಸೇರಿದಂತೆ ಕಂಪ್ಯೂಟರ್ ನೆಟ್‌ವರ್ಕ್‌ಗಳನ್ನು ವಿನ್ಯಾಸಗೊಳಿಸಿ, ಕಾನ್ಫಿಗರ್ ಮಾಡಿ ಮತ್ತು ನಿರ್ವಹಿಸಬೇಕು.
- ನೆಟ್‌ವರ್ಕ್ ಭದ್ರತೆ, ಸಮಗ್ರತೆ ಮತ್ತು ಸ್ಕೇಲೆಬಿಲಿಟಿಯನ್ನು ಖಚಿತಪಡಿಸಿಕೊಳ್ಳಿ.
- ಅತ್ಯುತ್ತಮ ಕಾರ್ಯಕ್ಷಮತೆಗಾಗಿ ರೂಟರ್‌ಗಳು, ಸ್ವಿಚ್‌ಗಳು ಮತ್ತು ಫೈರ್‌ವಾಲ್‌ಗಳನ್ನು ಕಾನ್ಫಿಗರ್ ಮಾಡಿ.
- ನೆಟ್‌ವರ್ಕ್ ಸಂಪರ್ಕ ಸಮಸ್ಯೆಗಳು ಮತ್ತು ಸ್ಥಗಿತಗಳನ್ನು ನಿವಾರಿಸಿ.

### ಡೇಟಾಬೇಸ್ ನಿರ್ವಹಣೆ :

- ಬ್ಯಾಂಕ್ ಡೇಟಾವನ್ನು ಸಂಗ್ರಹಿಸಲು ಮತ್ತು ನಿರ್ವಹಿಸಲು ಡೇಟಾಬೇಸ್ ಸಿಸ್ಟಮ್‌ಗಳನ್ನು ವಿನ್ಯಾಸಗೊಳಿಸಿ, ಕಾರ್ಯಗತಗೊಳಿಸಿ ಮತ್ತು ನಿರ್ವಹಿಸಿ.
- ಡೇಟಾ ಸುರಕ್ಷತೆ, ಸಮಗ್ರತೆ ಮತ್ತು ಬ್ಯಾಕಪ್‌ಗಳನ್ನು ಖಚಿತಪಡಿಸಿಕೊಳ್ಳಿ.
- ಡೇಟಾಬೇಸ್ ಕಾರ್ಯಕ್ಷಮತೆಯನ್ನು ಆಪ್ಟಿಮೈಸ್ ಮಾಡಿ ಮತ್ತು ಸಮಸ್ಯೆಗಳನ್ನು ನಿವಾರಿಸಿ.
- ನಿಯಂತ್ರಕ ಅಗತ್ಯತೆಗಳೊಂದಿಗೆ ಡೇಟಾ ಅನುಸರಣೆಯನ್ನು ಖಚಿತಪಡಿಸಿಕೊಳ್ಳಿ.
- ಭದ್ರತೆ
- ಸೈಬರ್ ಬೆದರಿಕೆಗಳು ಮತ್ತು ಡೇಟಾ ಉಲ್ಲಂಘನೆಗಳನ್ನು ತಡೆಗಟ್ಟಲು ಭದ್ರತಾ ಕ್ರಮಗಳನ್ನು ಜಾರಿಗೊಳಿಸಿ ಮತ್ತು ಮೇಲ್ವಿಚಾರಣೆ ಮಾಡಿ.




- ನಿಯಮಿತ ಭದ್ರತಾ ಲೆಕ್ಕಪರಿಶೋಧನೆ ಮತ್ತು ಅಪಾಯದ ಮೌಲ್ಯಮಾಪನಗಳನ್ನು ನಡೆಸುವುದು.
- ಭದ್ರತಾ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಿ ಮತ್ತು ಜಾರಿಗೊಳಿಸಿ.
- ನಿಯಂತ್ರಕ ಭದ್ರತಾ ಅವಶ್ಯಕತೆಗಳ ಅನುಸರಣೆಗಳನ್ನು ಖಚಿತಪಡಿಸಿಕೊಳ್ಳಿ.

### ದೋಷ ನಿವಾರಣೆ ಮತ್ತು ಬೆಂಬಲ :

- ಬ್ಯಾಂಕ್ ಸಿಬ್ಬಂದಿಗೆ ತಾಂತ್ರಿಕ ಬೆಂಬಲ ಮತ್ತು ದೋಷನಿವಾರಣೆ ಸಹಾಯವನ್ನು ಒದಗಿಸಿ.
- ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಪರಿಹರಿಸಿ.
- ತಾಂತ್ರಿಕ ಸಮಸ್ಯೆಗಳು ಮತ್ತು ನಿರ್ಣಯಗಳನ್ನು ದಾಖಲಿಸಿ ಮತ್ತು ಟ್ರ್ಯಾಕ್ ಮಾಡಿ.
- ತಾಂತ್ರಿಕ ದಾಖಲಾತಿ ಮತ್ತು ಜ್ಞಾನದ ಮೂಲವನ್ನು ಅಭಿವೃದ್ಧಿಪಡಿಸಿ ಮತ್ತು ನಿರ್ವಹಿಸಿ.

### ನಿರ್ವಹಣೆ ಮತ್ತು ನವೀಕರಣಗಳು :

- ನಿಯಮಿತ ಸಿಸ್ಟಮ್ ನವೀಕರಣಗಳು, ಪ್ಯಾಚ್‌ಗಳು ಮತ್ತು ನಿರ್ವಹಣೆ ಕಾರ್ಯಗಳನ್ನು ನಿರ್ವಹಿಸಿ.
- ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ನವೀಕೃತವಾಗಿದೆ ಮತ್ತು ನಿಯಂತ್ರಕ ಅಗತ್ಯತೆಗಳಿಗೆ ಅನುಗುಣವಾಗಿರುವುದನ್ನು ಖಚಿತಪಡಿಸಿಕೊಳ್ಳಿ.
- ನಿಯಮಿತ ಸಿಸ್ಟಮ್ ಬ್ಯಾಕಪ್‌ಗಳು ಮತ್ತು ವಿಪತ್ತು ಮರುಪಡೆಯುವಿಕೆ ಪರೀಕ್ಷೆಗಳನ್ನು ನಡೆಸುವುದು.
- ವ್ಯಾಪಾರ ನಿರಂತರತೆ ಮತ್ತು ವಿಪತ್ತು ಮರುಪಡೆಯುವಿಕೆ ಯೋಜನೆಗಳು ಜಾರಿಯಲ್ಲಿವೆ ಎಂದು ಖಚಿತಪಡಿಸಿಕೊಳ್ಳಿ.

ಮುಂದಿನ ಸಂಚಿಕೆಗೆ...

# ತೆರಿಗೆ ವಂಚನೆ ಮೇಲೆ ಡಿಜಿಟಲ್‌ಟೂಲ್‌ಗಳ ಮೂಲಕವೂ ಕಣ್ಣಿಡಲಿದೆ ಆದಾಯ ತೆರಿಗೆ ಇಲಾಖೆ

**ಲೋಕಸಭೆಯಲ್ಲಿ ಹಣಕಾಸು ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸಿದ ನಿರ್ಮಲಾ ಸೀತಾರಾಮನ್, ಹಳೆಯ ಆದಾಯ ತೆರಿಗೆ ಕಾನೂನು ಡಿಜಿಟಲ್ ಸ್ವತ್ತುಗಳನ್ನು ಪರಿಶೀಲಿಸಲು ಕಾನೂನು ಬೆಂಬಲ ನೀಡುತ್ತಿರಲಿಲ್ಲ. ಇದೇ ಕಾರಣಕ್ಕೆ ಇದನ್ನೀಗ ಸೇರಿಸಲಾಗಿದೆ. ಹೊಸ ಆದಾಯ ತೆರಿಗೆ ಕಾಯ್ದೆಯಲ್ಲಿ ಡಿಜಿಟಲ್ ಅಂಶಗಳ ಪರಿಶೀಲನೆಯನ್ನು ಸೇರಿಸಲಾಗಿದೆ, ಎಂದು ಹೇಳಿದ್ದಾರೆ. ಲೆಕ್ಕವಿಲ್ಲದ ಹಣವನ್ನು ಪತ್ತೆ ಹಚ್ಚುವಲ್ಲಿ ಡಿಜಿಟಲ್ ಫೋರೆನ್ಸಿಕ್ಸ್ ನಿರ್ಣಾಯಕ ಪಾತ್ರ ವಹಿಸಿದೆ ಎಂದಿರುವ ಸಚಿವರು, "ಮೊಬೈಲ್ ಫೋನ್‌ಗಳಲ್ಲಿ ಎನ್‌ಕ್ರಿಪ್ಟ್ ಮಾಡಲಾದ ಸಂದೇಶಗಳು ರೂ. 250 ಕೋಟಿಗಳಷ್ಟು ಲೆಕ್ಕವಿಲ್ಲದ ಹಣವನ್ನು ಪತ್ತೆಹಚ್ಚಲು ಸಹಾಯ ಮಾಡಿದೆ.**

**ದೆಹಲಿ :** ಆದಾಯ ತೆರಿಗೆ ಅಧಿಕಾರಿಗಳು ಇನ್ನು ಮುಂದೆ ಎಲ್ಲರ ಡಿಜಿಟಲ್ ಚಟುವಟಿಕೆಗಳ ಮೇಲೆಯೂ ಕಣ್ಣಿಡಲಿದೆ. ಈ ಮೂಲಕ ತೆರಿಗೆ ಕಳ್ಳಾಟಗಳನ್ನು ಪತ್ತೆ ಹಚ್ಚಿ, ತೆರಿಗೆ ವಸೂಲಿ ಮಾಡಲಿದೆ. ಈ ಸಂಬಂಧ ಕೇಂದ್ರ ಸರ್ಕಾರ ಆದಾಯ ತೆರಿಗೆ ಕಾಯಿದೆಗೆ ತಿದ್ದುಪಡಿ ತರಲಾಗುತ್ತಿದೆ.

ಹಿಂದಿನ ಆದಾಯ ತೆರಿಗೆ ಕಾಯ್ದೆಯಲ್ಲಿ ಡಿಜಿಟಲ್ ಸ್ವತ್ತುಗಳನ್ನು ತನಿಖೆಗೆ ಒಳಪಡಿಸಲು ಸಾಕಷ್ಟು ಕಾನೂನಿನ ಬೆಂಬಲ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಹೊಸ ಆದಾಯ ತೆರಿಗೆ ಮಸೂದೆ 2025ರ ಅಡಿಯಲ್ಲಿ ಡಿಜಿಟಲ್ ಸ್ವತ್ತುಗಳನ್ನು ಪತ್ತೆಹಚ್ಚಲು ಕಾನೂನು ನಿಬಂಧನೆಗಳನ್ನು ಬಲಪಡಿಸಲು ಸರ್ಕಾರ ಮುಂದಾಗಿದೆ ಎಂದು ಸ್ವತಃ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾರ್ಚ್ 25ರಂದು ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಹಣಕಾಸು ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸಿದ ನಿರ್ಮಲಾ ಸೀತಾರಾಮನ್, ಹಳೆಯ ಆದಾಯ ತೆರಿಗೆ ಕಾನೂನು ಡಿಜಿಟಲ್ ಸ್ವತ್ತುಗಳನ್ನು ಪರಿಶೀಲಿಸಲು ಕಾನೂನು ಬೆಂಬಲ ನೀಡುತ್ತಿರಲಿಲ್ಲ. ಇದೇ ಕಾರಣಕ್ಕೆ ಇದನ್ನೀಗ ಸೇರಿಸಲಾಗಿದೆ. ಹೊಸ ಆದಾಯ ತೆರಿಗೆ ಕಾಯ್ದೆಯಲ್ಲಿ ಡಿಜಿಟಲ್ ಅಂಶಗಳ ಪರಿಶೀಲನೆಯನ್ನು ಸೇರಿಸಲಾಗಿದೆ, ಎಂದು ಹೇಳಿದ್ದಾರೆ.

ಲೆಕ್ಕವಿಲ್ಲದ ಹಣವನ್ನು ಪತ್ತೆ ಹಚ್ಚುವಲ್ಲಿ ಡಿಜಿಟಲ್ ಫೋರೆನ್ಸಿಕ್ಸ್ ನಿರ್ಣಾಯಕ ಪಾತ್ರ ವಹಿಸಿದೆ ಎಂದಿರುವ ಸಚಿವರು, "ಮೊಬೈಲ್ ಫೋನ್‌ಗಳಲ್ಲಿ ಎನ್‌ಕ್ರಿಪ್ಟ್ ಮಾಡಲಾದ ಸಂದೇಶಗಳು ರೂ. 250 ಕೋಟಿಗಳಷ್ಟು ಲೆಕ್ಕವಿಲ್ಲದ ಹಣವನ್ನು ಪತ್ತೆಹಚ್ಚಲು ಸಹಾಯ ಮಾಡಿದೆ.

ವಾಟ್ಸಾಪ್ ಸಂದೇಶಗಳಿಂದ ಕ್ರಿಪ್ಟೋ ಸ್ವತ್ತುಗಳ ಪುರಾವೆಗಳು ಪತ್ತೆಯಾಗಿವೆ. ವಾಟ್ಸಾಪ್ ಸಂವಹನವೊಂದೇ ರೂ. 200 ಕೋಟಿಗೂ ಹೆಚ್ಚು ಲೆಕ್ಕವಿಲ್ಲದ ಹಣವನ್ನು ಪತ್ತೆಹಚ್ಚಲು ಸಹಾಯ ಮಾಡಿದೆ, ಎಂದು ವಿವರಿಸಿದ್ದಾರೆ.

ಹಣವನ್ನು ಮುಚ್ಚಿಡಲು ಬಳಸುವ ಸ್ಥಳಗಳನ್ನು ಪತ್ತೆ ಹಚ್ಚಲು ಆಗಾಗ ಭೇಟಿ ನೀಡುವ ಜಾಗವನ್ನು ತಿಳಿದುಕೊಳ್ಳಲು ಗೂಗಲ್ ಮ್ಯಾಪ್ ಹಿಸ್ಟರಿ ಬಳಸಲಾಗಿದೆ ಮತ್ತು ಬೇನಾಮಿ ಆಸ್ತಿಗಳನ್ನು ಪತ್ತೆಹಚ್ಚಲು ಇನ್‌ಸ್ಟಾಗ್ರಾಮ್ ಖಾತೆಗಳನ್ನು ವಿಶ್ಲೇಷಿಸಲಾಗಿದೆ ಎಂದು ತಿಳಿಸಿದ್ದಾರೆ.

ಹೊಸ ಮಸೂದೆಯು ಅಧಿಕಾರಿಗಳಿಗೆ ಇಮೇಲ್‌ಗಳು, ವಾಟ್ಸಾಪ್ ಮತ್ತು ಟೆಲಿಗ್ರಾಮ್‌ನಂತಹ ಸಂವಹನ ವೇದಿಕೆಗಳನ್ನು, ಹಾಗೂ ಹಣಕಾಸಿನ ವಹಿವಾಟುಗಳನ್ನು ಮರೆಮಾಡಲು ವ್ಯವಹಾರಗಳು ಬಳಸುವ ಎಂಟರ್‌ಪ್ರೈಸ್




ಸಾಫ್ಟ್‌ವೇರ್ ಮತ್ತು ಸ್ಟೋರೇಜ್ ಸರ್ವರ್‌ಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ ಎಂದು ಅವರು ವಿವರ ನೀಡಿದ್ದಾರೆ.

ನ್ಯಾಯಾಲಯದ ಮುಂದೆ ತೆರಿಗೆ ವಂಚನೆಯನ್ನು ಸಾಬೀತುಪಡಿಸಲು ಡಿಜಿಟಲ್ ಖಾತೆಗಳಿಂದ ಪುರಾವೆಗಳನ್ನು ಸಂಗ್ರಹಿಸುವುದು ಅತ್ಯಗತ್ಯ. ಅಲ್ಲದೆ ತೆರಿಗೆ ವಂಚನೆಯ ನಿಖರವಾದ ಮೊತ್ತವನ್ನು ಲೆಕ್ಕಾಚಾರ ಮಾಡಲು ಸಹ ಇದು ಅವಶ್ಯ ಎಂದು ಹೇಳಿದ್ದಾರೆ.

ಆದಾಯ ತೆರಿಗೆ ಮಸೂದೆ, 2025 ಪ್ರಸ್ತುತ ಸಂಸತ್ತಿನ ಆಯ್ಕೆ ಸಮಿತಿಯ ಪರಿಶೀಲನೆಯಲ್ಲಿದೆ. ಮಸೂದೆಯನ್ನು ಅಂತಿಮಗೊಳಿಸುವ ಮೊದಲು ಸಂಬಂಧಿತರೊಂದಿಗೆ ಇದು ಚರ್ಚೆಗಳನ್ನು ನಡೆಸಲಿದೆ. ಆರು ದಶಕಗಳಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961 ಅನ್ನು ಬದಲಾಯಿಸಲಾಗುತ್ತಿದ್ದು, ಡಿಜಿಟಲ್ ಯುಗಕ್ಕೆ ಬೇಕಾದ ಮಾರ್ಪಾಡುಗಳೊಂದಿಗೆ ಹೊರತರಲಾಗುತ್ತಿದೆ.

**ನೇರ ತೆರಿಗೆ ಸಂಗ್ರಹದಲ್ಲಿ ಏರಿಕೆ :** ನೇರ ತೆರಿಗೆ ಸಂಗ್ರಹವು ಗಣನೀಯವಾಗಿ ಏರಿಕೆ ಕಂಡಿದೆ ಎಂದು ಇದೇ ಸಂದರ್ಭದಲ್ಲಿ ಹಣಕಾಸು ಸಚಿವರು ಹೇಳಿದ್ದಾರೆ. ವೈಯಕ್ತಿಕ ಆದಾಯ ತೆರಿಗೆ ಸಂಗ್ರಹಗಳು ಗಣನೀಯವಾಗಿ ಏರಿಕೆ ಕಂಡಿದ್ದು, ತೆರಿಗೆ ವಿನಾಯಿತಿಯಿಂದಾಗಿ ಇಳಿಕೆಯನ್ನು ಗಣನೆಗೆ ತೆಗೆದುಕೊಂಡರೆ, 2026ನೇ ಆರ್ಥಿಕ ವರ್ಷದಲ್ಲಿ ತೆರಿಗೆ ಸಂಗ್ರಹವು ವಾಸ್ತವಿಕವಾಗಿರಲಿದೆ ಎಂದು ಅವರು ವಿವರ ನೀಡಿದ್ದಾರೆ.



## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಮ್ಯಾನ್ಮಾರ್ ಮತ್ತು ನೆರೆಯ ಥೈಲ್ಯಾಂಡ್‌ನಲ್ಲಿ 7.7 ತೀವ್ರತೆಯ ಭೂಕಂಪವು ದಿನಾಂಕ : 28-3-2025ರ ಮಧ್ಯಾಹ್ನ ಅಪ್ಪಳಿಸಿತು ಮತ್ತು ನಂತರ 6.4 ತೀವ್ರತೆಯ ಪ್ರಬಲವಾದ ನಂತರದ ಕಂಪನ ಸಂಭವಿಸಿತು. ಪ್ರಬಲ ಭೂಕಂಪದಿಂದ ದೇಶಾದ್ಯಂತ ಕಟ್ಟಡಗಳು, ಸೇತುವೆ ಮತ್ತು ಅಣೆಕಟ್ಟುಗಳು ನಾಶಗೊಂಡಿವೆ. ಮ್ಯಾನ್ಮಾರ್‌ನಲ್ಲಿ ಕನಿಷ್ಠ 144 ಮಂದಿ ಸಾವನ್ನಪ್ಪಿದ್ದು 732 ಜನರು ಗಾಯಗೊಂಡಿದ್ದಾರೆ.
- ಕಳೆದ ವರ್ಷ ರಾಜ್ಯ ಸರ್ಕಾರ ನಡೆಸಿದ ನಾಲ್ಕನೇ ಹಂತದ ವಾರ್ಷಿಕ ಹುಲಿ ಮೇಲ್ವಿಚಾರಣಾ ಸಮೀಕ್ಷೆಯಿಂದ ನಾಗರಹೊಳೆ, ಭಾಗವಾಗಿ ಬಂಡೀಪುರ, ಭದ್ರಾ, ಬಿಳಿಗಿರಿ ರಂಗನಾಥ ಮತ್ತು ಕಾಳಿ (ದಾಂಡೇಲಿ-ಅಂಶಿ) ಕರ್ನಾಟಕದ ಐದು ಹುಲಿ ಅಭಯಾರಣ್ಯಗಳಲ್ಲಿ ಒಟ್ಟು 393 ಹುಲಿಗಳು ಪತ್ತೆಯಾಗಿವೆ.
- ರಾಜ್ಯದ ಪ್ರಮುಖ ದೇವಾಲಯಗಳ ಪ್ರಸಾದವನ್ನು ಭಕ್ತರ ಮನೆ ಬಾಗಿಲಿಗೆ ತಲುಪಿಸುವ ಇ-ಪ್ರಸಾದವನ್ನು csc.devalayas.com ಮೂಲಕ ಪ್ರಸಾದ ತರಿಸಿ ಕೊಳ್ಳಬಹುದಾಗಿದೆ. ಇದರಲ್ಲಿ ಕಲ್ಲು-ಸಕ್ಕರೆ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಭಂಡಾರ, ಕುಂಕುಮ, ಭಸ್ಮ, ಬಿಲ್ವಪತ್ರೆ, ತುಳಸಿ, ದೇವರ ಚಿತ್ರ, ಸ್ಥಳ ಮಹಿಮೆ, ಸ್ತೋತ್ರಗಳು ಇರುವ ಪ್ರತಿ ಪ್ರಸಾದ ಪ್ಯಾಕೆಟಿನ ಬೆಲೆ ರೂ.100 ರಿಂದ ರೂ.200 ಗಳವರೆಗೆ ಇರಲಿದೆ.
- ಗುಬ್ಬಿ ತಾಲ್ಲೂಕಿನ ಅಳಕಟ್ಟೆ ಎಲ್. ತಾಂಡಾದ ಗಂಗಲಕ್ಷ್ಮಮ್ಮ ಅವರು ತಮ್ಮ ಮನೆಯಲ್ಲೇ ಅಣಬೆ ಬೆಳೆಯುವ ಮೂಲಕ ಬದುಕು ಕಟ್ಟಿಕೊಂಡಿದ್ದು, ಅಣಬೆ ಬೇಸಾಯದಿಂದ ತಿಂಗಳಿಗೆ ಅರವತ್ತು ಸಾವಿರಕ್ಕೂ ಹೆಚ್ಚು ಹಣ ಸಂಪಾದಿಸುತ್ತಿದ್ದಾರೆ.
- ರೂ.62,000 ಕೋಟಿ ಮೌಲ್ಯದ 156 ಎಲ್ಸಿಎಚ್ ಪ್ರಚಂಡ್ ಹೆಲಿಕಾಪ್ಟರ್‌ಗಳನ್ನು ಖರೀದಿಸಲು ಭಾರತೀಯ ಸೇನೆ ಮತ್ತು ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್ ನಡುವೆ ಅತೀ ದೊಡ್ಡ ರಕ್ಷಣಾ ಒಪ್ಪಂದ ಏರ್ಪಟ್ಟಿದ್ದು, ಇದು ಇದುವರೆಗಿನ ಅತಿದೊಡ್ಡ ರಕ್ಷಣಾ ಒಪ್ಪಂದವಾಗಿದೆ.
- ವಿಶ್ವದ ಅಗ್ರ 10 ಶ್ರೀಮಂತರ ಪಟ್ಟಿಯಲ್ಲಿ ಮತ್ತೊಮ್ಮೆ ಟೆಸ್ಲಾ ಕಂಪನಿಯ ಸಿಇಒ ಎಲೋನ್‌ಮಸ್ಕ್ ಮೊದಲ ಸ್ಥಾನಕ್ಕೆ ಏರಿದ್ದರೆ, ಎಚ್‌ಸಿಎಲ್ ಕಂಪನಿಯ ರೋಶ್ನಿ ನಾಡರ್ ವಿಶ್ವದ ಐದನೇ ಶ್ರೀಮಂತ ಮಹಿಳೆಯಾಗುವ ಮೂಲಕ ವಿಶ್ವದ ಅಗ್ರ 10 ಮಹಿಳೆಯರಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ.

## ಓದುಗರ ಅನಿಸಿಕೆ...




**ಬ್ಯಾಂಕುಗಳು ಅರಿಯಬೇಕಿದೆ :** ಗ್ರಾಹಕರು ಖಾತೆ ತೆರೆಯುವಾಗಲೇ ದಾಖಲೆಗಳನ್ನು ಕೆವೈಸಿ ಸಲ್ಲಿಸಿದ್ದರೂ ಬ್ಯಾಂಕುಗಳು ಕೆವೈಸಿ ದಾಖಲೆಗಾಗಿ, ಗ್ರಾಹಕರಿಗೆ ಪದೇ ಪದೇ ಕರೆ ಮಾಡುವುದನ್ನು ನಿಲ್ಲಿಸುವಂತೆ ರಿಸರ್ವ್ ಬ್ಯಾಂಕ್ ತಿಳಿಸಿರುವುದು ಸರಿಯಾಗಿದೆ. ಗ್ರಾಹಕ ಸೇವೆಯನ್ನು ಸುಧಾರಿಸುವುದು ಕೇವಲ ಕರ್ತವ್ಯ ಮಾತ್ರವಲ್ಲ, ಬ್ಯಾಂಕುಗಳ ಜವಾಬ್ದಾರಿಯಾಗಿದೆ ಎನ್ನುವುದನ್ನು ಬ್ಯಾಂಕುಗಳು ಅರಿಯಬೇಕಿದೆ.

**▸▸ ರಘುಪತಿ ಎಂ., ದಾವಣಗೆರೆ**

**ಗ್ರಾಹಕರಿಗೆ ಬರೆ ಹಾಕಿದಂತಾಗಿದೆ :** ಆರ್‌ಬಿಐ ಹೊಸ ನೀತಿಯ ಪ್ರಕಾರ, ಬ್ಯಾಂಕಿನ ಖಾತೆದಾರರು ತಮ್ಮ ಖಾತೆಗಳನ್ನು ಸಕ್ರಿಯವಾಗಿ ಇರಿಸಿಕೊಳ್ಳಬೇಕಿದ್ದರೆ, ತಮ್ಮ ಖಾತೆಗಳಲ್ಲಿ ಆಯಾ ಬ್ಯಾಂಕುಗಳು ಸೂಚಿಸಿದ ಕನಿಷ್ಠ ಬ್ಯಾಲೆನ್ಸ್ ಮೊತ್ತವನ್ನು ಕಾಯ್ದುಕೊಳ್ಳಬೇಕಿದೆ. ಇಲ್ಲದಿದ್ದಲ್ಲಿ ಅವರ ಖಾತೆಯನ್ನು ಮುಚ್ಚಲು ಇದು ಕಾರಣವಾಗಲಿದೆ ಎಂದಿರುವುದು ಗ್ರಾಹಕರಿಗೆ ಬರೆ ಹಾಕಿದಂತಾಗಿದೆ.

**▸▸ ಕೆ. ಆನಂದಮೂರ್ತಿ, ಹರಿಹರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.